HEAVY INDUSTRIES IN HOSANAGAR TOWN

35. Sri S. M. SHEERANALY CHANDRASHEKAR (Hosanagar).—

Will the Minister for Industries be pleased to state:—

(*a*) whether it has come to the notice of Government that surrounding villages of Hosanagar Town have been submerged with the result that the Town has lost its economic stability;

(*b*) if so, whether there is any proposal before Government to set up some Government sponsored Heavy Industries in the Town?

Sri S. M. KRISHNA (Minister for Industries).—

(*a*) No.

(*b*) Does not arise in view of reply to clause (*a*).

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ವಿಚಾರವನ್ನು ಮಂತ್ರಿಗಳ ಗಮನಕ್ಕೆ ತಂದಿದೆ. ಅಲ್ಲದೆ ತಮ್ಮ ಇಲಾಖೆಯವರು ಎರಡುಮೂರು ದಿನ ಹೊಸನಗರದಲ್ಲಿ ಕ್ಯಾಂಪು ಮಾಡಿ ವರದಿಮಾಡಿದ್ದಾರೆ. ರಾಮೆಟೀರಿಯಲ್ಸ್‌ಗೆ ಸಹ ಸದವಕಾಶವಿದೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ?

†ಶ್ರೀ ಎಸ್. ಎಂ. ಕೃಷ್ಣ.—ಇಲಾಖೆ ಅಧಿಕಾರಿಗಳು ಹೋಗಿ ಸರ್ವೆ ಮಾಡುವ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅವರೇನು ಅಭಿಪ್ರಾಯ ಸೂಚಿಸುವರೋ ಅದನ್ನು ಮಾನ್ಯ ಸದಸ್ಯರಿಗೆ ತಿಳಿಸಲಾಗುವುದು. ನಂತರ ಅಲ್ಲಿರುವ ಕೈಗಾರಿಕೋದ್ಯಮಿಗಳು ಅರ್ಜಿ ಹಾಕಿದರೆ ಕೈಗಾರಿಕೆಗಳನ್ನು ಸ್ಥಾಪಿಸಲು ಏನೆಲ್ಲಾ ಸಹಾಯ ಸಹಕಾರ ಸರಕಾರ ಕೊಡಬೇಕೋ ಅದನ್ನು ಕೊಡುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹೊಸನಗರ ತಾಲ್ಲೂಕ್ ಕೊಡಚಾದ್ರಿ ಸಮೀಪದಲ್ಲಿ ಅತ್ಯುತ್ಕೃಷ್ಟವಾದ ಮ್ಯಾಗ್ನೆಟೈಟ್ ಸಿಕ್ಕುತ್ತದೆ ಎಂದು ತಿಳಿದುಬಂದಿರುವುದರಿಂದ ಅಲ್ಲಿ ಸರ್ಕಾರದ ವತಿಯಿಂದ ಒಂದು ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಆಲೋಚನೆಮಾಡುತ್ತೀರಾ?

ಶ್ರೀ ಎಸ್. ಎಂ ಕೃಷ್ಣ.—ನಮ್ಮ ಸರ್ಕಾರದ ವತಿಯಿಂದ ಸ್ಥಾಪನೆ ಮಾಡುವುದಕ್ಕೆ ಸಂಪನ್ಮೂಲಗಳ ಅಭಾವವಿರುವುದರಿಂದ, ಸರ್ಕಾರಧಪರು ರಾಜ್ಯದಲ್ಲಿ ಕೈಗಾರಿಕೆಯನ್ನು ಬೆಳೆಸ ಬೇಕಾಗಿರುವುದರಿಂದ ಅದರ ಸ್ಥಾಪನೆಗೇನು ಸಹಾಯ ಬೇಕೋ ಅದನ್ನು ಕೊಡುವುದಕ್ಕೆ ಸಿದ್ಧರಿದ್ದಾರೆ. ಶ್ರೀ ಕೋಣಂದೂರು ಲಿಂಗಪ್ಪನವರು ಈಗಾಗಲೇ ನನ್ನಲ್ಲಿ ಮಾತನಾಡಿ ತಿಳಿಸಿರುವಂತೆ ಅಲ್ಲಿ ಕೆಲವರು ಹಣವಂತರೂ, ಧನಿಕರೂ ಇರುತ್ತಾರೆಂದು ಹೇಳಿದ್ದಾರೆ. ಅವರನ್ನು ಮಾನ್ಯ ಸದಸ್ಯರು ಈ ಕೈಗಾರಿಕೆಯನ್ನು ತೆಗೆಯುತಕ್ಕ ಜಾಡಿಗೆ ಇಳಿಸಿದರೆ ಇದರಿಂದ ರಾಜ್ಯಕ್ಕೆ ಒಂದು ಮಹದುಪಕಾರವಾಗುತ್ತದೆ.

COPPER PROJECT IN CHITRADURGA

56. Sri B. SATYANARAYANA SINGH (Hospet).—

Will the Minister for Industries be pleased to state:—

(a) the estimated cost of the Copper Mining Project of Chitradurga: